# ಕೆ.ಎ.ಎಸ್. ಪ್ರಶ್ನೆಪತ್ರಿಕೆ – 2012

## ಸಾಮಾನ್ಯ ಅಧ್ಯಯನ

### (ಪತ್ರಿಕೆ - 1)

ಅವಧಿ : 2 ಗಂಟೆ ಅಂಕಗಳು : 150

1. **ಭಾರತ ರಾಷ್ಟ್ರಗೀತೆ ಜನಗಣಮನವನ್ನು ರಚಿಸಿದವರು ........... ಮತ್ತು ಅದಕ್ಕೆ (2011ರಲ್ಲಿ) .........ವರ್ಷ.**
   ಖಾಲಿ ಬಿಟ್ಟಿರುವ ಸ್ಥಳಗಳನ್ನು ಅನುಕ್ರಮವಾಗಿ ಭರ್ತಿಮಾಡಿ.
   ಎ. ಬಂಕಿಮ ಚಂದ್ರ ಚಟರ್ಜಿ, 100ನೇ
   ಬಿ. ರವೀಂದ್ರನಾಥ ಟ್ಯಾಗೋರ್, 100ನೇ
   ಸಿ. ಬಂಕಿಂ ಚಂದ್ರ ಚಟರ್ಜಿ, 125ನೇ
   ಡಿ. ರವೀಂದ್ರನಾಥ ಟ್ಯಾಗೋರ್, 125ನೇ

2. **ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಅಧ್ಯಕ್ಷೀಯ ಚುನಾವಣೆಗಳನ್ನು ........... ವರ್ಷಗಳಿಗೊಮ್ಮೆ ನಡೆಸಲಾಗುತ್ತದೆ.. ಈಗ ಆ ಚುನಾವಣೆಯನ್ನು .............ರಲ್ಲಿ ನಡೆಸಲು ನಿಗಧಿಸಲಾಗಿದೆ.**
   ಖಾಲಿ ಬಿಟ್ಟಿರುವ ಸ್ಥಳಗಳನ್ನು ಅನುಕ್ರಮವಾಗಿ ಭರ್ತಿಮಾಡಿ.
   ಎ. 5 ಹಾಗೂ ನವೆಂಬರ್ 2012
   ಬಿ. 5 ಹಾಗೂ ನವೆಂಬರ್ 2013
   ಸಿ. 4 ಹಾಗೂ ನವೆಂಬರ್ 2012
   ಡಿ. 4 ಹಾಗೂ ನವೆಂಬರ್ 2013

3. **2012ರ ಫೆಬ್ರವರಿಯಲ್ಲಿ ನಡೆದ ಪೋಲಿಸ್ ಬಂಡಾಯದಿಂದಾಗಿ, ಕೆಳಕಂಡ ದೇಶದ ಅಧ್ಯಕ್ಷರು ಸ್ಥಾನವನ್ನು ತ್ಯಜಿಸಬೇಕಾಯಿತು.**
   ಎ. ಮಾಲ್ಡೀವ್ಸ್ ಬಿ. ಲಕ್ಷದ್ವೀಪ
   ಸಿ. ಉಗಾಂಡ ಡಿ. ಫಿಲಿಪೈನ್ಸ್

**ನಿರ್ದೇಶನಗಳು:**

**34 ಮತ್ತು 35ನೇ ಪ್ರಶ್ನೆಗಳಲ್ಲಿ 1 ಮತ್ತು 2 ಎಂಬ ಎರಡು ವಿವರಣೆಗಳಿವೆ. ಸರಿಯಾದ ವಿವರಣೆಯನ್ನು ಗುರುತಿಸುವುದಕ್ಕಾಗಿ ಕೆಳಕಂಡ ಸಂಕೇತಗಳನ್ನು ಬಳಸಿ ಉತ್ತರಿಸಿ.**

**ಸಂಕೇತ:**

ಎ. ಎರಡೂ ವಿವರಣೆಗಳು ಸರಿ
ಬಿ. 1ನೆಯ ವಿವರಣೆ ಮಾತ್ರ ಸರಿ
ಸಿ. 2ನೆಯ ವಿವರಣೆ ಮಾತ್ರ ಸರಿ
ಡಿ. ಎರಡೂ ವಿವರಣೆಗಳೂ ತಪ್ಪು

4. **1) ಭಾರತವು ಗೆಲುವು ಸಾಧಿಸುವ 2011ರ ವಿಶ್ವಕಪ್ ಕ್ರಿಕೆಟ್‌ನ ಅಂತಿಮ ಪಂದ್ಯವು ಕೋಲ್ಕತ್ತದಲ್ಲಿ ನಡೆಯಿತು.**
   **2) ವಿಶ್ವಕಪ್ ಕ್ರಿಕೆಟ್‌ನ 2011ರ ಪಂದ್ಯಗಳಲ್ಲಿ ಯುವರಾಜ್ ಸಿಂಗ್ ಅವರನ್ನು ಸರಣಿಯ ಶ್ರೇಷ್ಠ ಎಂದು ತೀರ್ಮಾನಿಸಲಾಯಿತು.**

5. **1) ಡೋ (DOW) ಕೆಮಿಕಲ್ಸ್‌ನವರು 2012ರ ಲಂಡನ್ ಒಲಿಂಪಿಕ್ಸ್‌ನ್ನು ಪ್ರಾಯೋಜಿಸುವ ಬಗ್ಗೆ ಬಲವಾದ ಭಿನ್ನಮತ ವ್ಯಕ್ತವಾಗಿದೆ.**
   **2) 2011ರ ಮಾರ್ಚ್‌ನಲ್ಲಿ ಸಂಭವಿಸಿದ ಭೂಕಂಪನದಿಂದ ಜಪಾನಿನ ಫುಕುಶಿಮಾದಲ್ಲಿರುವ ಪರಮಾಣು ರಿಯಾಕ್ಟರ್‌ಗೆ ತೀವ್ರವಾಗಿ ಹಾನಿ ಉಂಟಾಗಿದೆ.**

6. **10ಕಿ.ಮೀ ಹಾಂಗ್‌ಕಾಂಗ್ ಸ್ಪರ್ಧೆಯಲ್ಲಿ ಓಡಿದ ಬ್ರಿಟಿಷ್-ಭಾರತೀಯ ಶತಾಯುಷಿ ಮ್ಯಾರಥಾನ್ ಓಟಗಾರ ಯಾರು?**
   ಎ. ಮಿಲ್ಕಾಸಿಂಗ್ ಬಿ. ಸೂರ್ಯವೀರ್‌ಸಿಂಗ್
   ಸಿ. ಗಗನ್ ಸಿಂಗ್ ಡಿ. ಫೌಜಾ ಸಿಂಗ್

7. **ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ 'ಮಾನವ ಸಫಾರಿ'ಗಳಲ್ಲಿ ಅಧಿಕಾರಿಗಳು ಭಾಗಿಯಾಗಿರುವುದರಿಂದ ಕೆಳಕಂಡ ರಕ್ಷಿತ ಬುಡಕಟ್ಟುಗಳು ಶೋಷಣೆ ಯಾಗುತ್ತಿರುವುದು ಇತ್ತೀಚೆಗೆ ಬಹಿರಂಗಗೊಂಡಿದೆ.**
   ಎ. ಸಂತಾಲ್ ಬಿ. ಮರಮ್
   ಸಿ. ಜಾರವಾ ಡಿ. ಲಂಬಾಣಿ

8. **ಕೆಳಕಂಡ ಮಧ್ಯಮ ಬಹುಮುಖೀ ಯುದ್ಧದ ವಿಮಾನಗಳನ್ನು ಕೊಳ್ಳುವುದಕ್ಕಾಗಿ ಭಾರತದ ರಕ್ಷಣಾ ಮಂತ್ರಾಲಯವು ಫ್ರಾನ್ಸ್‌ನೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಂಡಿದೆ.**
   ಎ. ರಫೇಲ್ ಬಿ. ಮಿಗ್
   ಸಿ. ಯುರೋಫೈಟರ್ ಡಿ. ಲಂಬಾಣಿ

9. **ಇತ್ತೀಚೆಗೆ ನಿಧನರಾದ ಹಿರಿಯ ರಾಜತಂತ್ರಜ ಹಾಗೂ ಲೇಖಕರ ಹೆಸರೇನು?**
   ಎ. ಎಂ.ಎಲ್. ಸೋಂಧಿ ಬಿ. ಎ.ಕೆ. ದಾಮೋದರನ್
   ಸಿ. ಅಪ್ಪಾದುರೈ ಡಿ. ಬ್ರಿಜೇಶ್ ಮಿಶ್ರಾ

10. **ಇತ್ತೀಚೆಗೆ ಭಾರತದ ಸರ್ವೋಚ್ಚನ್ಯಾಯಾಲಯವು ..... ರಷ್ಟು ಕಂಪನಿಗಳ ಪರವಾನಗಿಯನ್ನು 2 ಜಿ ಸ್ಪೆಕ್ಟ್ರಂ ವ್ಯವಹಾರದ ಅಡಿಯಲ್ಲಿ ಅಕ್ರಮ ಎಂದು ರದ್ದುಪಡಿಸಿತು.**

ಎ. 102 ಬಿ. 112 ಸಿ.122 ಡಿ. 132

11. **"The Grand Old man of India"ಎಂದು ಕರೆಯಲ್ಪಡುತ್ತಿದ್ದವರು.**

ಎ. ಲಾಲಾ ಲಜಪತ್ ರಾಯ್

ಬಿ. ಬಾಲಗಂಗಾಧರ ತಿಲಕ್

ಸಿ. ಸುರೇಂದ್ರನಾಥ ಬ್ಯಾನರ್ಜಿ

ಡಿ. ದಾದಾಬಾಯ್ ನವರೋಜಿ

12. **ದಕ್ಷಿಣ ಆಫ್ರಿಕಾದಲ್ಲಿದ್ದ ಗಾಂಧೀಜಿಯವರ ಆಶ್ರಮದ ಹೆಸರು.**

ಎ. **The Phoenix Settlement**

ಬಿ. **Sarvodaya Enclave**

ಸಿ. **Young India** ಡಿ. **UNTO the Last**

13. **ಕೆಳಗಿನ ವಿವರಣೆಗಳನ್ನು ಓದಿ:**

1. ಅಶೋಕನ ಬಹುತೇಕ ಶಾಸನಗಳು ಪ್ರಾಕೃತ ಭಾಷೆಯಲ್ಲಿದ್ದವು. ಆದರೆ ಉಪಖಂಡದ ವಾಯುವ್ಯ ಭಾಗದಲ್ಲಿರುವ ಶಾಸನಗಳು ಅರಮೇಯಿಕ್ ಮತ್ತು ಗ್ರೀಕ್ ಭಾಷೆಯಲ್ಲಿದ್ದವು.
2. ಬಹುತೇಕ ಪ್ರಾಕೃತ ಶಾಸನಗಳನ್ನು ಬ್ರಾಹ್ಮೀಲಿಪಿಯಲ್ಲಿ ಬರೆಯಲಾಗಿದೆ.
3. ಆದರೆ ವಾಯುವ್ಯ ಭಾಗದಲ್ಲಿರುವ ಕೆಲವನ್ನು ಖರೋಷ್ಠಿ ಲಿಪಿಯಲ್ಲಿ ಬರೆಯಲಾಗಿದೆ.

**ಈ ಕೆಳಗಿನ ಸಂಕೇತಗಳಿಂದ ಸರಿ ಉತ್ತರವನ್ನು ಆಯ್ಕೆ ಮಾಡಿ.**

ಎ. (1) ಮತ್ತು (2) ಸರಿ ಇವೆ

ಬಿ. (1) ಮಾತ್ರ ಸರಿ ಇದೆ

ಸಿ. (2) ಮತ್ತು (3) ಸರಿ ಇವೆ

ಡಿ. (1), (2) ಮತ್ತು (3) ಸರಿ ಇವೆ

14. **ಕೆಳಕಂಡ ವಿವರಣೆಗಳನ್ನು ಓದಿ:**

ರೆವಿನ್ಯೂ ಉದ್ದೇಶಗಳಿಗಾಗಿ ಅಶೋಕ ಚಕ್ರವರ್ತಿಯು ಭೂಮಿಯನ್ನು ಕೆಳಕಂಡಂತೆ ವರ್ಗೀಕರಿಸಿದ್ದ:

1. ಪೊಲಾಜ್ ಎನ್ನುವುದು ಪ್ರತಿಯೊಂದು ಬೆಳೆಗಾಗಿ ಅನುಕ್ರಮವಾಗಿ ಬೇಸಾಯ ಮಾಡುತ್ತಿದ್ದ ಭೂಮಿಯಾಗಿದ್ದು ಅದನ್ನು ಎಂದೂ ಬೀಳು ಬಿಡುತ್ತಿರಲಿಲ್ಲ.
2. ಪರೌತಿ ಎನ್ನುವುದು ಭೂಮಿಯು ತನ್ನ ಸತ್ವವನ್ನು ಮತ್ತೆ ಗಳಿಸಿಕೊಳ್ಳಲು ಅವಕಾಶ ಮಾಡಿಕೊಡುವುದಕ್ಕಾಗಿ ಸ್ವಲ್ಪ ಕಾಲದವರೆಗೆ ಯಾವುದೇ ಬೇಸಾಯ ಮಾಡದೆ ಬಿಟ್ಟಿರುತ್ತಿದ್ದಂಹ ಭೂಮಿ.
3. ಚಚಾರ್ ಎನ್ನುವುದು ಮೂರು ಅಥವಾ ನಾಲ್ಕು ವರ್ಷಗಳವರೆಗೆ ಬೀಳು ಬಿಟ್ಟಿರುತ್ತಿದ್ದಂತಹ ಭೂಮಿ.
4. ಬಂಜಾರ್ ಎನ್ನುವುದು 5 ವರ್ಷ ಮತ್ತು ಅದಕ್ಕಿಂತ ಹೆಚ್ಚು ಕಾಲದವರೆಗೆ ಬೇಸಾಯ ಮಾಡದೆ ಇರುತ್ತಿದ್ದಂತಹ ಭೂಮಿ.

**ಈ ಕೆಳಗಿನ ಸಂಕೇತಗಳಿಂದ ಸರಿ ಉತ್ತರವನ್ನು ಆಯ್ಕೆ ಮಾಡಿ.**

ಎ. (4) ವಿತರಣೆ ಮಾತ್ರ ಸರಿಯಿದೆ

ಬಿ. (1) ಮತ್ತು (2) ವಿವರಣೆಗಳು ಸರಿಯಿವೆ

ಸಿ. (1),(3) ಮತ್ತು (4) ವಿವರಣೆಗಳು ಸರಿಯಿವೆ

ಡಿ. ಮೇಲಿನ ಎಲ್ಲಾ ವಿವರಣೆಗಳು ಸರಿ ಇವೆ

15. **1857ರಲ್ಲಿ ಭಾರತದ ವಿವಿಧ ಭಾಗಗಳ ನಾಯಕರು ಬ್ರಿಟಿಷರ ವಿರುದ್ಧ ಬಂಡೆದ್ದರು. ಈ ಕೆಳಗಿನವುಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗಿಲ್ಲ?**

ಎ. ಕನ್ವರ್ ಸಿಂಗ್ –ಬಿಹಾರ್

ಬಿ. ನಾನಾಸಾಹಿಬ್ – ನಾಗಪುರ್

ಸಿ. ಬಿರ್ಜಿಸ್ ಖದರ್ – ಲಕ್ನೋ

ಡಿ. ಶಾಮಲ್ – ಬಾರೋತ್

16. **ಅರ್ಥಶಅಸ್ತ್ರಜ್ಞರ ಪ್ರಕಾರ, ವಸಾಹತುಶಾಹಿ ಕಾಲದಲ್ಲಿ ಭಾರತದಲ್ಲಿ ಕೇವಲ ಎರಡು ನಗರಗಳು ಮಾತ್ರ ಸಮರ್ಪಕವಾದ ಕೈಗಾರಿಕಾ ನಗರಗಳಾಗಿದ್ದವು. ಅವುಗಳೆಂದರೆ,**

ಎ. ಕಲ್ಕತ್ತಾ ಮತ್ತು ಬಾಂಬೆ

ಬಿ. ಬಾಂಬೆ ಮತ್ತು ಮದ್ರಾಸ್

ಸಿ. ಜಮ್‌ಶೆಡ್‌ಪುರ್ ಮತ್ತು ಕಾನ್ಪುರ್

ಡಿ. ಜಮ್‌ಶೆಡ್‌ಪುರ್ ಮತ್ತು ಬಾಂಬೆ

17. **ಬ್ರಿಟಿಷರ ವಿರುದ್ಧ ಸತ್ಯಾಗ್ರಹ ನಡೆಸುವುದಕ್ಕೆ ಮೊದಲು ಒಂದು ವರ್ಷಕಾಲ ಬ್ರಿಟಿಷ್ ಭಾರತದಲ್ಲಿ ಪ್ರವಾಸಮಾಡಿ ಬರುವಂತೆ ಗಾಂಧೀಜಿಯವರಿಗೆ ತಿಳಿಸಿದವರು ಯಾರು?**

ಎ. ಬಾಲಗಂಗಾಧರ ತಿಲಕ್ ಬಿ.ಮೊಹಮದ್ ಅಲಿ ಜಿನ್ನಾ

ಸಿ. ಗೋಪಾಲ ಕೃಷ್ಣ ಗೋಖಲೆ

ಡಿ. ಲಾಲಾ ಲಜಪತ್ ರಾಯ್

18. **ನೆಹರೂ ಅವರ ವರದಿಯನ್ನು ಹಿಂದೂ ಹಿತಾಸಕ್ತಿಗಳನ್ನು ಪ್ರತಿನಿದಿಸುತ್ತಿದೆ ಎಂದು ಹೇಳಿದ ಎಂ.ಎ.ಜಿನ್ನಾ, ಹದಿನಾಲ್ಕು ಅಂಶಗಳನ್ನು ಮುಂದಿಟ್ಟರು. ಈ ಕೆಳಗಿನ ಯಾವ ಅಂಶಗಳು ಅದರಲ್ಲಿ ಸೇರಿದ್ದವು?**

1. ದೆಹಲಿ ಪ್ರಸ್ತಾವಗಳು

2. ಕಲ್ಕತ್ತಾ ತಿದ್ದುಪಡಿಗಳು
3. ಪ್ರತ್ಯೇಕ ಮತದಾರ ಮಂಡಳಿ
4. ಸರ್ಕಾರಿ ಸೇವೆಯಲ್ಲಿ ಮುಸ್ಲಿಮರಿಗೆ ಮೀಸಲಾತಿ

ಎ. (1) ಮತ್ತು (2) ಮಾತ್ರ
ಬಿ. (3) ಮತ್ತು (4) ಮಾತ್ರ
ಸಿ. (1) ಮತ್ತು (4) ಮಾತ್ರ
ಡಿ. ಮೇಲಿನ ಎಲ್ಲವೂ

19. **'ದೇವನಾಂಪ್ರಿಯ' ಮತ್ತು 'ಪ್ರಿಯದರ್ಶಿನಿ' ಎಂಬುದು ಈ ಕೆಳಕಂಡ ವ್ಯಕ್ತಿಯ ಇತರ ಹೆಸರುಗಳು**

ಎ. ಹರ್ಷವರ್ಧನ ಬಿ. ಮಹಾವೀರ
ಸಿ. ಗೌತಮ ಬುದ್ಧ ಡಿ. ಅಶೋಕ

20. **ಕೆಳಗಿನ ಯಾವ ಕ್ರಮಗಳನ್ನು ಜಾರಿಗೆ ತರುವ ಬಗ್ಗೆ ರೌಲಟ್ ಕಾಯಿದೆ ಪ್ರಯತ್ನಿಸಿತು?**

1. ಪತ್ರಿಕೆಗಳ ಮೇಲೆ ಇನ್ನೂ ಹೆಚ್ಚಿನ ಹಾಗೂ ಕಟ್ಟುನಿಟ್ಟಿನ ನಿಯಂತ್ರಣ
2. ರಾಜಕೀಯ ಅಪರಾಧಿಗಳ ವಿಚಾರಣೆಯನ್ನು ನ್ಯಾವೇತ್ತಿರಲ್ಲದೆ ನ್ಯಾಯಾಧೀಶರೇ ನಡೆಸುವುದು.
3. ವಿದ್ವಂಸಕ ಗುರಿ ಹೊಂದಿದವರು ಎಂದು ಸಂದೇಹಿಸಲಾದ ವ್ಯಕ್ತಿಗಳನ್ನು ವಿಚಾರಣೆಯಿಲ್ಲದೆ ಸ್ಥಾನ ಬದ್ಧತೆಯಲ್ಲಿರುವುದು.
4. ದೇಶದಾದ್ಯಂತ ಸೈನಿಕ ಕಾನೂನಿನ ಆಡಳಿತ.

ಎ. (1) ಮತ್ತು (4) ಮಾತ್ರ
ಬಿ. (1),(2) ಮತ್ತು (3) ಮಾತ್ರ
ಸಿ. (2), (3) ಮತ್ತು (4) ಮಾತ್ರ
ಡಿ. ಮೇಲಿನ ಎಲ್ಲವೂ

21. **ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನವನ್ನು (1924) ''ಯೂನಿಟಿ ಕಾಂಗ್ರೆಸ್'' ಎಂದು ಕರೆಯಲಾಗಿದೆ. ಕಾಂಗ್ರೆಸ್ ಅಧಿವೇಶನದ ಜೊತೆಜೊತೆಗೇ ನಡೆದ ಇತರ ಅಧಿವೇಶನ ಯಾವುದು?**

1. ಅಖಿಲ ಭಾರತ ಖಿಲಾಫತ್ ಸಮ್ಮೇಳನ
2. ಅಖಿಲ ಭಾರತ ಹಿಂದೂ ಮಹಾಸಭೆ
3. ಅಖಿಲ ಭಾರತ ಬ್ರಾಹ್ಮಣೇತರ ಸಮ್ಮೇಳನ
4. ಅಖಿಲ ಭಾರತ ಸಾಮಾಜಿಕ ಸಮ್ಮೇಳನ

ಎ. (1), (2) ಮತ್ತು (4)
ಬಿ. (1),(3) ಮತ್ತು (4)
ಸಿ. (2), (3) ಮತ್ತು (4)
ಡಿ. ಮೇಲಿನ ಎಲ್ಲವೂ

22. **ಕರ್ನಾಟಕ ವೈಭವವು ಈ ಕೆಳಕಂಡ ಯಾವ ಪ್ರಭಾವಗಳನ್ನು ಬೀರಿತು?**

1. ಕನ್ನಡಿಗರಲ್ಲಿ ಸಾಂಸ್ಕೃತಿಕ ಒಗ್ಗಟ್ಟನ್ನು ಉಂಟು ಮಾಡಿತು.
2. ಅದು ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಫೂರ್ತಿ ನೀಡಿತು.
3. ಅದು ಕನ್ನಡಿಗರಲ್ಲಿ ತಮ್ಮ ಗತ ವೈಭವದ ಬಗ್ಗೆ ಜಾಗೃತಿಯನ್ನುಂಟು ಮಾಡಿತು.

ಸರಿಯಾದ ಉತ್ತರ
ಎ. (1) ಮತ್ತು (3) ಮಾತ್ರ
ಬಿ. (1) ಮತ್ತು (2) ಮಾತ್ರ
ಸಿ. (2) ಮತ್ತು (3) ಮಾತ್ರ ಡಿ. ಮೇಲಿನ ಎಲ್ಲವೂ

23. **ಕ್ರಿ.ಪೂ. ಏಳನೇ ಮತ್ತು ಐದನೇ ಶತಮಾನಗಳ ನಡುವಿನ ಅವಧಿಯಲ್ಲಿ ಈ ಕೆಳಕಂಡ ಯಾವ ಗಮನಾರ್ಹ ಬೆಳವಣಿಗೆಗಳು ನಡೆದವು?**

1. ಬೌದ್ಧಿಕ ಜೀವನ ಪ್ರಕ್ಷುಬ್ಧ ಸ್ಥಿತಿಯಲ್ಲಿತ್ತು .
2. ಹಳೆಯ ಬುಡಕಟ್ಟು ರಚನೆ ಶಿಥಿಲವಾಗತೊಡಗಿತ್ತು
3. ಚಿಕ್ಕ ಚಿಕ್ಕ ಪ್ರಾದೇಶಿಕ ರಾಜ್ಯಗಳು ಕಣ್ಮರೆಯಾಗಿದ್ದವು

ಸರಿಯಾದ ಉತ್ತರ
ಎ. (1) ಮತ್ತು (3) ಮಾತ್ರ
ಬಿ. (1) ಮತ್ತು (2) ಮಾತ್ರ
ಸಿ. (2) ಮತ್ತು (3) ಮಾತ್ರ
ಡಿ. ಮೇಲಿನ ಎಲ್ಲವೂ

24. **ಭಾರತದ ರಾಷ್ಟ್ರೀಯ ಚಳುವಳಿ ಸಂವಿಧಾನಾತ್ಮಕ ಹಂತದ ಭಾಗವಾಗಿದ ಚಟುವಟಿಕೆಗಳು ಯಾವುವು?**

1. ಖಾದಿಯ ಪ್ರವರ್ಧಮೆ
2. ಅಸಹಕಾರ ಚಳುವಳಿ
3. ಉಪ್ಪಿನ ಸತ್ಯಾಗ್ರಹ
4. ಅಸ್ಪೃಶ್ಯತೆಯ ವಿರುದ್ಧ ಹೋರಾಟ

ಸರಿಯಾದ ಉತ್ತರ
ಎ. (1) ಮತ್ತು (4) ಬಿ. (1) ಮತ್ತು (3)
ಸಿ. (2) ಮತ್ತು (4) ಡಿ. (1) ಮತ್ತು (4)

25. **ಈ ಕೆಳಗಿನ ಯಾವ ಸಂಗತಿಗಳು ಆರ್ಯಭಟನಿಗೆ ತಿಳಿಸಿದ್ದವು?**

1. ಭೂಮಿಯು ಸೂರ್ಯನ ಸತ್ತ ಸುತ್ತುತ್ತದೆ.
2. ಸೂರ್ಯ ಮತ್ತು ಚಂದ್ರ ಗ್ರಹಣಕ್ಕೆ ಕಾರಣಗಳು
3. ನಕ್ಷತ್ರಗಳು ಸೂರ್ಯನ ಬೆಳಕನ್ನು ಪ್ರತಿಫಲಿಸುತ್ತವೆ.
4. ಗ್ರಹಗಳು ಸೂರ್ಯನ ಸುತ್ತಧೀರ್ಘ ವೃತ್ತೀಯ ಪಥದಲ್ಲಿ ಚಲಿಸುತ್ತವೆ.

ಮೇಲಿನ ವಿವರಣೆಗಳಲ್ಲಿ ಸರಿಯಾದವುಗಳು: ಐಐ

ಎ. (1), (2) ಮತ್ತು (3)

ಬಿ. (2), (3) ಮತ್ತು (4)


ಸಿ. (1), (3) ಮತ್ತು (4)

ಡಿ. (1), (2) ಮತ್ತು (4)

26. **ಇಲ್ಲಿ ಕೊಟ್ಟಿರುವ ಭೂಪಟದಲ್ಲಿ ಸಂಕೇತದೊಂದಿಗೆ ಬಾಣದಿಂದ ಗುರುತಿಸಲಾಗಿರುವ ಸಾಗರದ ಉಷ್ಣ ಮತ್ತು ಶೀಲ ಪ್ರವಾಹಗಳ ಸರಿಯಾದ ಜೋಡಿಯನ್ನು ಗುರುತಿಸಿ.**

ಎ. 1, 2 ಬಿ. 4,3

ಸಿ. 12, 34 ಡಿ. 14,25



27. **ಕೆಳಕಂಡ ವಿವರಣೆಗಳನ್ನು ಆಧರಿಸಿ ಅಗ್ನಿಶಿಲೆ, ಜಲಶಿಲೆ ಮತ್ತು ರೂಪಾಂತರಿ ಶಿಲೆಗಳ ಸರಿಯಾದ ಅನುಕ್ರಮ ಣಿಕೆಯನ್ನು ಗುರುತಿಸಿ:**

1. ಕೆಲವು ಶಿಲೆಗಳು ತುಲನಾತ್ಮಕವಾಗಿ ಮೆದುವಾಗಿದ್ದು, ಅವುಗಳನ್ನು ಕೆರೆದಾಗ ಪುಡಿ ಬರುತ್ತದೆ.
2. ಅವು ದುಂಡಾದ ಕಣಗಳನ್ನು ಹೊಂದಿರುವುದಿಲ್ಲ ಅವು ಸ್ಪಟಿಕಗಳಿಂದ ಆಗಿರುತ್ತವೆ.
3. ಹೆಚ್ಚೂಕಡಿಮೆ ಅವು ಮೂಲ ಸ್ಥಾನದಲ್ಲೇ ಇರುತ್ತವೆ ಆದರೆ ಆಂತರಿಕ ಮತ್ತು ಹೊರಗಿನ ಬಲಗಳಿಂದಾಗಿ ಅವುಗಳ ಸ್ಥಾನ ಬದಲಾಗುತ್ತದೆ.

ಎ. 1, 2, 3 ಬಿ. 3, 2, 1

ಸಿ. 2, 1, 3 ಡಿ. 1, 3, 2

28. **ಕೆಳಗಿನ I ಪಟ್ಟನ್ನು II ರೊಂದಿಗೆ ಸರಿಹೊಂದಿಸಿ ಹಾಗೂ ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.**

| ಪಟ್ಟಿ I (ಏಜೆಂಟ್) | ಪಟ್ಟಿ II (ಭೂ-ರೂಪ) |
|---|---|
| ಎ. ನದಿ | 1. ಇನ್‌ಸೆಲ್ ಬರ್ಗ್ |
| ಬಿ. ಹಿಮನದಿ | 2. ಸ್ವಾಭಾವಿಕ ಸೇತುವೆಗಳು |
| ಸಿ. ಗಾಳಿ | 3. ಪ್ರಪಾತಗಳು |
| ಡಿ. ಅಂತರ್ಜಲ | 4. ಕೂಂಬ್ ಬ್ರಿಡ್ಜ್ |
| ಇ. ಕಡಲ ಅಲೆಗಳು | 5. ಮೆಕ್ಕಲು ಸೋಪಾನಗಳು |

**ಸಂಕೇತಗಳು:**

| | A | B | C | D | E |
|---|---|---|---|---|---|
| ಎ) | 5 | 3 | 2 | 4 | 1 |
| ಬಿ) | 5 | 4 | 1 | 2 | 3 |
| ಸಿ) | 5 | 3 | 2 | 1 | 4 |
| ಡಿ) | 2 | 1 | 3 | 4 | 5 |

29. **ಕೆಳಗಿನ ವಿವರಣೆಗಳನ್ನು ಪರಿಶೀಲಿಸಿ:**

1. ತೇವಭರಿತ ಉಷ್ಣವಲಯ ಸ್ಥಿತಿಗಳಲ್ಲಿ ಸವೆತದಿಂದ ಉಂಟಾದ ಕೆಂಪುಶೇಷ ನಿಕ್ಷೇಪವನ್ನು ಈ ಮಣ್ಣು ಹೊಂದಿರುತ್ತದೆ.
2. ಇದು ಮುಖ್ಯವಾಗಿ ಕಬ್ಬಿಣ ಹಾಗೂ ಅಲ್ಯೂಮಿನಿಯಂ ಆಕ್ಸೈಡ್‌ಗಳನ್ನು ಹೊಂದಿರುತ್ತದೆ ಮತ್ತು ಹೆಚ್ಚು ಉಬ್ಬಿಲ್ಲದ ಸಮತಲ ಮೇಲ್ಮೈಗಳಲ್ಲಿ ಕಂಡುಬರುತ್ತದೆ.

ಇಲ್ಲಿ ಸೂಚಿಸಲಾಗಿರುವ ಮಣ್ಣು ಯಾವುದು?

ಎ. ಕೆಂಪು ಮಣ್ಣು

ಬಿ. ಜಂಬಿಟ್ಟಿಗೆ ಮಣ್ಣು

ಸಿ. ಉಷ್ಣವಲಯದ ಕಪ್ಪು ಭೂಮಿ

ಡಿ. ಫಲವತ್ತಾದ ಕಪ್ಪು ಮಣ್ಣು

30. **ಆಫ್ರಿಕಾದಲ್ಲಿ $20^0$ ಯಿಂದ $30^0$ಪೂರ್ವ ರೇಖಾಂಶಗಳ ನಡುವೆ ಉತ್ತರದಿಂದ ದಕ್ಷಿಣಕ್ಕೆ ಸಾಗಿ ಬಂದರೆ ನಿಮಗೆ ಕಂಡುಬರುವ ವಿಶಾಲವಾದ ಸ್ವಾಭಾವಿಕ ಸಸ್ಯ ಸಂಪತ್ತನ್ನು ಸರಿಯಾದ ಅನುಕ್ರಮದಲ್ಲಿ ತಿಳಿಸಿ.**

ಎ. ಸವನ್ನಾ–ಮರುಭೂಮಿ ಮಾದರಿ –ಮಳೆಕಾಡುಗಳು – ಮೆಡಿಟರೇನಿಯನ್ ಮಾದರಿ –ಸವನ್ನಾ– ಮರುಭೂಮಿ ಮಾದರಿ

ಬಿ. ಮಳೆಕಾಡುಗಳು – ಸವನ್ನಾ – ಮರುಭೂಮಿ– ಮಾದರಿ – ಮೆಡಿಟರೇನಿಯನ್ ಮಾದರಿ– ಸವನ್ನಾ – ಮರುಭೂಮಿ ಮಾದರಿ

ಸಿ. ಮೆಡಿಟರೇನಿಯನ್ ಮಾದರಿ – ಮಳೆಕಾಡುಗಳು– ಮರುಭೂಮಿ ಮಾದರಿ– ಸವನ್ನಾ– ಮರುಭೂಮಿ ಮಾದರಿ – ಮೆಡಿಟರೇನಿಯನ್ ಮಾದರಿ

ಡಿ. ಮರುಭೂಮಿ ಮಾದರಿ– ಸವನ್ನಾ– ಮಳೆಕಾಡುಗಳು– ಸವನ್ನಾ– ಮರುಭೂಮಿ ಮಾದರಿ – ಮೆಡಿಟರೇನಿಯನ್ ಮಾದರಿ

31. **ಕೆಳಗಿನ ಪಟ್ಟಿ I ನ್ನು (ಸರೋವರಗಳು) II (ದೇಶಗಳು) ಏರೊಂದಿಗೆ ಸರಿಹೊಂದಿಸಿ ಹಾಗೂ ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.**

| ಪಟ್ಟಿ I (ಸರೋವರಗಳು) | ಪಟ್ಟಿ II (ದೇಶಗಳು) |
|---|---|
| ಎ. ತುರ್ಕಾನ ಸರೋವರ (ರುಡಾಲ್ಫ್) | 1. ಇನ್‌ಸೆಲ್ ಬರ್ಗ್ |
| ಬಿ. ಹಿಮನದಿ | 2. ಸ್ವಾಭಾವಿಕ ಸೇತುವೆಗಳು |

ಸಿ. ಗಾಳಿ 3. ಪ್ರಪಾತಗಳು
ಡಿ. ಅಂತರ್ಜಲ 4. ಕೂಂಬ್ ಬ್ರಿಡ್ಜ್
ಇ. ಕಡಲ ಅಲೆಗಳು 5. ಮೆಕ್ಕಲು ಸೋಪಾನಗಳು

**ಸಂಕೇತಗಳು:**

| | A | B | C | D | E |
|---|---|---|---|---|---|
| ಎ) | 5 | 3 | 2 | 4 | 1 |
| ಬಿ) | 5 | 4 | 1 | 2 | 3 |
| ಸಿ) | 5 | 3 | 2 | 1 | 4 |
| ಡಿ) | 2 | 1 | 3 | 4 | 5 |

32. **ಭಾರತ ಮತ್ತು ಕರ್ನಾಟಕದ ಪ್ರಕೃತಿ ಭೂಗೋಳಕ್ಕೆ ಸಂಬಂಧಿಸಿದಂತೆ ಕೆಳಕಂಡ ವಿವರಣೆಗಳನ್ನು ಪರಿಶೀಲಿಸಿ.**

1. ಇಂಡೋ-ಗ್ಯಾಂಜೆಟಿಕ್ ಮೈದಾನವು ದಕ್ಷಿಣ ಭಾರತಕ್ಕಿಂತ ಎತ್ತರವಾದ ಸರಾಸರಿ ಉನ್ನತಿಯೊಂದಿಗೆ ಸರ್ವಋತು ನದಿಗಳನ್ನು ಹೊಂದಿದೆ.
2. ಪಶ್ಚಿಮದಲ್ಲಿ ಹರಿಯುವ ಕರ್ನಾಟಕದ ನದಿಗಳನ್ನು ಗರಿಷ್ಠ ಹರಿವಿನ ಅವುಗಳ ಕೆಳ ವಿಸ್ತಾರದಿಂದ ಪೂರ್ವದಿಕ್ಕಿನಲ್ಲಿ ಹರಿಯುವ ನದಿಗಳಿಗೆ ಸಂಪರ್ಕಿಸಬಹುದು

ಸರಿಯಾದ ವಿವರಣೆಯನ್ನು ಸಂಕೇತಗಳಿಂದ ತಿಳಿಸಿ:

ಎ. 1 ಮಾತ್ರ ಸರಿ ಬಿ. 2 ಮಾತ್ರ ಸರಿ
ಸಿ. 1 ಮತ್ತು 2 ಎರಡೂ ಸರಿ
ಡಿ. 1 ಮತ್ತು 2 ಎರಡೂ ತಪ್ಪು

33. **ಕೆಳಗಿನ ಪಟ್ಟಿ I ನ್ನು (ಬಂದರು) II ರೊಂದಿಗೆ ಸರಿಹೊಂದಿಸಿ ಹಾಗೂ ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.**

| **ಪಟ್ಟಿ I** (ಬಂದರು) | **ಪಟ್ಟಿII** (ರಫ್ತು ಮಾಡುವ ಮುಖ್ಯ ಉತ್ಪನ್ನ) |
|---|---|
| ಎ. ಟ್ಯೂಟಿಕಾರಿನ್ | 1. ಸಾಂಬಾರ ಪದಾರ್ಥಗಳು |
| ಬಿ. ಮುಂಬೈ | 2. ಕಬ್ಬಿಣದ ಅದಿರು |
| ಸಿ. ಗೋವಾ | 3. ಗ್ರಾನೈಟ್ |
| ಡಿ. ಮಂಗಳೂರು | 4.ಶುದ್ಧೀಕರಿಸಿದ ಪೆಟ್ರೋಲಿಯಂ ಉತ್ಪನ್ನಗಳು |
| ಇ. ಕೊಚಿನ್ | 5. ರಾಸಾಯನಿಕ ಗೊಬ್ಬರ |

**ಸಂಕೇತಗಳು:**

| | A | B | C | D | E |
|---|---|---|---|---|---|
| ಎ) | 2 | 1 | 5 | 3 | 4 |
| ಬಿ) | 5 | 4 | 2 | 3 | 1 |
| ಸಿ) | 5 | 4 | 2 | 1 | 3 |
| ಡಿ) | 3 | 1 | 5 | 2 | 4 |

34. **ಅರೋರಾ ಬೋರಿಯಾಲಿಸ್ ಎಲ್ಲಿ ಉಂಟಾಗುತ್ತದೆ?**

ಎ. ಸ್ಟ್ರಾಟೋಸ್ಫಿಯರ್ ಬಿ. ಟ್ರೋಪೋಸ್ಫಿಯರ್
ಸಿ. ಓಜೋನೋಸ್ಫಿಯರ್ ಡಿ. ಅಯನೋಸ್ಫಿಯರ್

35. **ಗಂಗಾ ನದಿಯಿಂದ ರೂಪುಗೊಂಡ ಮುಖಜಭೂಮಿಯು ಈ ಕೆಳಗಿನದಕ್ಕೆ ಉದಾಹರಣೆ.**

ಎ. ಆರ್ಕ್ಯುಯೇಟ್ ಮುಖಜಭೂಮಿ
ಬಿ. ಅಳಿವೆ ರೂಪದ ಮುಖಜಭೂಮಿ
ಸಿ. ಶೃಂಗಾಕೃತಿಯ ಮುಖಜಭೂಮಿ
ಡಿ. ಪಕ್ಷಿಧಾಮ ಮುಖಜಭೂಮಿ

36. **ಈ ಕೆಳಗಿನವುಗಳಲ್ಲಿ ಸರಿಯಾಗಿ ಹೊಂದಿಕೆಯಾಗಿರುವಂಥವನ್ನು ಗುರುತಿಸಿ.**

1. ಎಸ್ಕಿಮೊ-ಕೆನಡಾ 2. ಒರಾನ್-ನಾರ್ವೆ
3. ಲ್ಯಾಪ್ಸ್-ಭಾರತ 4. ಗೊಂಡರು-ಆಫ್ರಿಕಾ

ಎ. 1 ಮತ್ತು 2 ಬಿ. 1 ಮಾತ್ರ
ಸಿ. 2 ಮತ್ತು 3 ಡಿ. 4 ಮಾತ್ರ

37. **ಈ ಕೆಳಗಿನ ಹಿಮಾಲಯಕ್ಕಿಂತ ಪ್ರಾಚೀನವಾದುವು ಯಾವುವು?**

1. ಸಿಂಧೂ 2. ಗಂಗಾ 3. ಬ್ರಹ್ಮಪುತ್ರ 4. ಸಟ್ಲೆಜ್

ಎ. 1,2 ಮತ್ತು 3 ಮಾತ್ರ
ಬಿ. 2,3 ಮತ್ತು 4 ಮಾತ್ರ
ಸಿ. 1,2 ಮತ್ತು 4 ಮಾತ್ರ
ಡಿ. 1,3 ಮತ್ತು 4 ಮಾತ್ರ

38. **ಭೂಮಿಯ ಮೇಲಿನ ಒಂದು ನಿರ್ದಿಷ್ಟ ಸ್ಥಳದಿಂದ ನಾವು ಸೂರ್ಯಗ್ರಹಣಕ್ಕಿಂತ ಚಂದ್ರಗ್ರಹಣಗಳನ್ನು ಹೆಚ್ಚು ಸಂಖ್ಯೆಯಲ್ಲಿ ಕಾಣುತ್ತೇವೆ. ಇದಕ್ಕೆ ಕಾರಣವೇನು?**

ಎ. ಒಂದು ವರ್ಷದಲ್ಲಿ ಸಂಭವಿಸುವ ಚಂದ್ರ ಗ್ರಹಣಗಳ ಸಂಖ್ಯೆಯು ಸೂರ್ಯ ಗ್ರಹಣಗಳಿಂದ ಹೆಚ್ಚಾಗಿರುತ್ತದೆ.
ಬಿ. ಎಲ್ಲಾ ಚಂದ್ರಗ್ರಹಣಗಳು ಗೋಳಾರ್ಧದಾದ್ಯಂತ ಕಂಡುಬರುತ್ತವೆ ಆದರೆ ಎಲ್ಲ ಸೂರ್ಯಗ್ರಹಣಗಳೂ ಹೀಗೆಕಾಣುವುದಿಲ್ಲ
ಸಿ. ಚಂದ್ರಗ್ರಹಣಗಳು ಸೂರ್ಯಗ್ರಹಣಗಳಿಗಿಂತ ಹೆಚ್ಚು ಪ್ರಕಟಿತವಾಗಿರುತ್ತವೆ.
ಡಿ. ಚಂದ್ರಗ್ರಹಣಗಳು ಯಾವಾಗಲೂ ಪೂರ್ಣವಾಗಿರುತ್ತವೆ ಆದರೆ ಸೂರ್ಯಗ್ರಹಣಗಳು ಸಾಮಾನ್ಯವಾಗಿ ಭಾಗಶಃವಾಗಿರುತ್ತವೆ.